# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 10 Reg. No. : KARBIL / 2005 / 16123 ಸಪ್ಟಂಬರ್ - 2021 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30–00 ಸಂಚಿಕೆ 8 + 9 ಪ್ರಕಟಣೆ : 15-09-2021


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

ಪುತ್ತೂರಿನ 'ಶಿವಸದನ'ವು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದಲ್ಲಿ ಆರಂಭಿಸಿರುವ ಹಿರಿಯ ನಾಗರಿಕರ ವಸತಿಗೃಹ ನೂತನ ಯೋಜನೆಗೆ ಸಮಾಜ ಬಾಂಧವರು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಶ್ರೀ ಸಭಾದ ಸಮಾಜಮುಖೀ ಕಾರ್ಯಕ್ಕೆ ಧನಸಹಾಯವನ್ನು ನೀಡಿ ಉತ್ಸಾಹ ತುಂಬಿ ಸಮಾಜಕ್ಕೆ ಮಾದರಿಯಾಗುತ್ತಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಇವರ ಈ ಕಾರ್ಯವು ಇತರರಿಗೂ ಪ್ರೇರಣದಾಯಕವಾಗಲಿ ಹಾಗೂ ಶ್ರೀ ಸಭಾದ ನೂತನ ಯೋಜನೆಗಳಿಗೆ ಇನ್ನಷ್ಟು ನೆರವು ಹರಿದು ಬರಲಿ ಎಂದು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತ ಮಂಡಳಿ ಹಾರೈಸುತ್ತಿದೆ.

'ಶಿವಸದನ' ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 20ಕ್ಕೂ ಹೆಚ್ಚು ನಿವಾಸಿಗಳಿದ್ದು, ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಈ ಮಾಹಿತಿಯನ್ನು ನೀಡಿ, ಸಹಕರಿಸಿ.

ಸಂಪರ್ಕಿಸಿ : ಶ್ರೀ ಕರುಣ್ ರಾವ್ ಬೆಳ್ಳೆ ಮೊಬೈಲ್ : **7337634359** ಶ್ರೀ ಪಿ. ಶ್ರೀಕಾಂತ್ ರಾವ್ ಮೊಬೈಲ್ : **7795116598**



ಉಡುಪಿಯ ಡಾ| ವೈ. ವಿದ್ಯಾ ರಾವ್, ಅಸಿಸ್ಟೆಂಟ್ ಪ್ರೊಫೆಸರ್, M.I.T. ಮಣಿಪಾಲ್ ಮತ್ತು ಪ್ರಸಿದ್ಧ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ವೈ. ಸುದರ್ಶನ್ ರಾವ್ ತಮ್ಮ ಹೆತ್ತವರಾದ ಡಾ. ವೈ. ಚಂದ್ರಶೇಖರ ರಾವ್ ಮತ್ತು ಶ್ರೀಮತಿ ಇಂದಿರಾ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **5** ಲಕ್ಷ ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

ಉಡುಪಿ ಭಾರತ್ ಬಿಲ್ಡರ್ಸ್ ಮ್ಹಾಲಕರಾದ ಶ್ರೀಮತಿ ಪೂರ್ಣಿಮಾ ಮತ್ತು ಶ್ರೀ ಯು. ಪ್ರಫುಲ್ಲಚಂದ್ರ ರಾವ್ ಇವರು ತಮ್ಮ ತಂದೆ ಯು. ಅನಂತಕೃಷ್ಣ ರಾವ್ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **5** ಲಕ್ಷ ದೇಣಿಗೆ ನೀಡಿದ್ದಾರೆ.





ಮಂಗಳೂರಿನ ಕದ್ರಿ ನಿವಾಸಿಗಳಾದ ಶ್ರೀ ಶ್ರೀಧರ್ ರಾವ್ ಮತ್ತು ಶ್ರೀಮತಿ ರತ್ನಾ ಎಸ್. ರಾವ್ ದಂಪತಿಗಳು ತಮ್ಮ ಮಗ ಚಿ| ಶ್ರೀರಂಜನ್ ಮತ್ತು ಚಿ| ಸೌ| ಶ್ರೇಯಾರವರ ಮದುವೆಯ ಸವಿನೆನಪಿಗಾಗಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

ನಂದಿಕೂರ್ ಜನಾರ್ದನ ರಾವ್ ಮತ್ತು ಶ್ರೀಮತಿ ಶುಭಾರವರ **32**ನೇ ವಿವಾಹ ವಾರ್ಷಿಕೋತ್ಸವ ಹಾಗೂ ತಮ್ಮ ಮಗ ಚಿ| ಪುನೀತ್ ಮತ್ತು ಕು| ಶ್ರೇಯಾರವರ ವಿವಾಹ ಸವಿನೆನಪಿಗಾಗಿ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** ಲಕ್ಷ ದೇಣಿಗೆ ನೀಡಿದ್ದಾರೆ.





ಮಂಗಳೂರು 'ವಿಜಯ ನಿವಾಸ' ಪೈಕಾನ ವೆಂಕಟ್ರಮಣಯ್ಯ ಮತ್ತು ಕೂಡ್ಲು ರಮಾಬಾಯಿ ಮಕ್ಕಳಾದ ಶ್ರೀಮತಿ ವೇದಾವತಿ ಭಟ್, ಶ್ರೀಮತಿ ಉಷಾ ರಾವ್, ಶ್ರೀಮತಿ ವಿಜಯಾ ಭಟ್, ಶ್ರೀ ಶ್ರೀನಿವಾಸ ರಾವ್, ಶ್ರೀಮತಿ ವಸಂತಿ ರಾವ್, ಶ್ರೀಮತಿ ಸರೋಜಾ ರಾವ್, ಶ್ರೀ ಪಿ. ಶ್ರೀಕಾಂತ್ ರಾವ್‌ರವರು ತಮ್ಮ ಹೆತ್ತವರ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **52,500/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

ಮಂಗಳೂರಿನ ನಿವಾಸಿ ಶ್ರೀ ಜಯಪ್ರಕಾಶ್ ಮತ್ತು ಶ್ರೀಮತಿ ಶ್ರೀಲತಾ ದಂಪತಿಗಳು ಮತ್ತು ಅವರ ಸುಪುತ್ರಿ ಶ್ರೀಮತಿ ಶೀತಲ್ ಹಾಗೂ ಶ್ರೀ ಆಶುತೋಷ್‌ರವರ ಸುಪುತ್ರಿ ಡಾ. ತನ್ವಿ ರಾವ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವ ಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **25,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.



ಚಿತ್ರ : ಶ್ರೀ ರಘುವೀರ್ ಜಪ್ಪಿನಮೊಗರು

- ಸಜ್ಜನರು ಯಾಕೆ ಸದಾ ಕಷ್ಟಪಡುತ್ತಾರೆ? ಉಜ್ಜಾಟವಿಲ್ಲದೆ ವಜ್ರ ಹೊಳಪಾಗುವುದಿಲ್ಲ. ಬೆಂಕಿಯಿಲ್ಲದೆ ಚಿನ್ನವನ್ನು ಪರಿಶುದ್ಧಗೊಳಿಸಲಾಗುವುದಿಲ್ಲ. ಸಜ್ಜನರು ಪರೀಕ್ಷೆಗೆ ಒಳಪಡುತ್ತಾರೆ. ಆದರೆ ಕಷ್ಟವನ್ನು ಅನುಭವಿಸುವುದಿಲ್ಲ ಅಥವಾ ನರಳುವುದಿಲ್ಲ. ಈ ಅನುಭವದಿಂದ ಜೀವನ ಉತ್ತಮಗೊಳ್ಳುತ್ತದೆ – ಕಹಿಯಾಗುವುದಿಲ್ಲ. – ಶ್ರೀ ರಾಮಕೃಷ್ಣ ಪರಮಹಂಸ

**ಜ್ಞಾನಶಕ್ತಿ ಮಾಸಪತ್ರಿಕೆ**

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್
ಪುತ್ತೂರು
ಮೊಬೈಲ್ : 9448481696

ಸಂಪಾದಕರು :
ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
ನಾಗರಾಜ್ ವರ್ಕಾಡಿ
ರಘುವೀರ್ ಪೆರ್ಡೂರು
ಟಿ. ಬಿ. ಮೋಹನ್ ರಾವ್
ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
ಕರುಣ್ ರಾವ್ ಬೆಳ್ಳಿ
ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು :
ಚೇತನ್ ಶರ್ಮ
ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು :
ಹರ್ಷಕುಮಾರ್ ಕೇದಿಗೆ


## ಗಝಲ್

ಲೋಕಗರ್ಭವ ಹೊಕ್ಕು ಬರುತಿರೆ
ಸುಂದರ ನೋಟವು ತುಂಬಿತು ಭರವಸೆ
ನಿಬಿಡ ಕಾನನದ ವೃಕ್ಷದ ನಡುವೆ
ಬೆಳಕನು ಕಾಣಲು ಹೊಮ್ಮಿತು ಭರವಸೆ

ಬಳಿತ ಸ್ನೇಹವು ಕಳಚಿ ಜಾಳಲು
ಕಾಲ ಪ್ರಭಾವದಿ ಮನವು ನಡುಗದೇ
ಮೋಡವು ಕರಗುತ ಪ್ರಖರ ಕಿರಣವು
ಭುವಿಯ ತಲುಪಲು ಕಂಡಿತು ಭರವಸೆ

ಜಂಝಾವಾತಕೆ ಉರುಳಲು ಗಿಡಮರ
ಚಿತ್ತದಿ ಭಯವನು ಬಿತ್ತುವುದು
ಹಾದಿಯ ಇಕ್ಕೆಲ ಬೆಳೆದಿಹ ಹಸುರಿನ
ತೃಣವನು ನೋಡುತ ಚಿಮ್ಮಿತು ಭರವಸೆ

ಬೆಟ್ಟದ ಝರಿಯದು ಧುಮುಕುತ ಹರಿಯುತ
ಬಳುಕುತ ವಿಸ್ತರವಾಗುವುದು
ಬಾಳಿನ ಪಯಣದ ಕಠಿಣ ಸಮಯದಿ
ಸಹಾಯ ಹಸ್ತವು ಕೊಟ್ಟಿತು ಭರವಸೆ

ಸ್ವಾರ್ಥವ ಮರೆಯುತ ತ್ಯಾಗದಿ ಬದುಕಲು
ತುಂಬಲು ಎಲ್ಲೆಡೆ ವಿಪುಲ ಶಾಂತಿಯು
ಹಿತದ ದಿನಗಳು ಬರುವವುಯೆಂಬ
ಜೀವನ ಪ್ರೀತಿಯು ತಂದಿತು ಭರವಸೆ

ಡಾ. ವೀಣಾ ಎನ್., ಸುಳ್ಯ



## ಶ್ರೀ ಹರ್ಷಕುಮಾರ್ ಕೇದಿಗೆ ಮತ್ತು ಶ್ರೀಮತಿ ಕನಕವಲ್ಲಿ ಎಚ್. ಕೇದಿಗೆಯವರಿಗೆ DIAMOND DISTRICT CHAIR PERSON AWARD




ತಾರೀಕು 5–9–2021ರಂದು ಬಂಟ್ವಾಳದ ಬೆಂಜನಪದವಿನ 'ಸುಬ್ಬಲಕ್ಷ್ಮಿ' ಸಭಾಂಗಣದಲ್ಲಿ ಚಿಕ್ಕಮಗಳೂರು, ಹಾಸನ, ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳನ್ನೊಳಗೊಂಡ 2020–21ನೇ ಲಯನ್ಸ್ ಅವಾರ್ಡ್ ಸಮಾರಂಭದಲ್ಲಿ ಶ್ರೀ ಹರ್ಷಕುಮಾರ್ ಕೇದಿಗೆ ಮತ್ತು ಶ್ರೀಮತಿ ಕನಕವಲ್ಲಿ ಎಚ್. ಕೇದಿಗೆ ಇವರು ಕಿಕ್ಕಿರಿದ ಸಭಾಂಗಣದಲ್ಲಿ ಸಭಿಕರ ಕರತಾಡನದೊಂದಿಗೆ **DIAMOND DISTRICT CHAIR PERSON AWARD 2020-21**ನ್ನು ಪಡೆದಿರುತ್ತಾರೆ.

## ಗಣಿತ - ಅಗಣಿತ




ಇವತ್ತು ಬೆಳಗ್ಗೆ ನಮ್ಮ ಹಳೆಯ ಗಣಿತ ಶಿಕ್ಷಕರು ಸಿಕ್ಕಿದ್ರು... ಅವರೀಗ ನಿವೃತ್ತರಾಗಿದ್ದಾರೆ.

ಸ್ವಲ್ಪ ಹೊತ್ತು ಮಾತಾಡಿ ಮನಸ್ಸು ಸಂತೋಷ ವಾಯಿತು. ಹೋಗುವಾಗ ಸರ್ ನಿಮ್ಮ ಮೊಬೈಲ್ ನಂಬರ್ ಕೊಡಿ ಅಂದೆ.

ಮೇಷ್ಟ್ರು ಹೇಳಿದರು, ಒಂಭೈನೂರಾ ಐವತ್ನಾಲ್ಕು ಕೋಟಿ ಹದಿಮೂರು ಲಕ್ಷದ ಎಂಬತ್ತ ಮೂರು ಸಾವಿರದ ನಾನೂರಾ ಹತ್ತೊಂಬತ್ತು.

## 'ಸತ್ಯಮೇವ ಜಯತೆ'



ಸತ್ಯವನ್ನು ಹೂತಿಡಬಹುದು. ಅದರ ಸ್ಫೋಟವನ್ನು ಮುಂದೂಡಬಹುದು.

ಆದರೆ ಯಾರಿಗೂ ಸತ್ಯವೆಂಬುದನ್ನು ನಾಶ ಗೊಳಿಸಲು ಸಾಧ್ಯವಿಲ್ಲ. ಗೋಡೆಗಳ ಅಡಿಯಿಂದ, ಗೋರಿಗಳ ಆಳದಿಂದ, ಮರೆತ ಗುಹೆಗಳಿಂದ, ಕಳೇಬರಗಳ ಹೃದಯದಿಂದ.

ಅಷ್ಟೆಲ್ಲ ಏಕೆ ಭೂತಕಾಲದ ಗರ್ಭದಿಂದ ಇದ್ದಕ್ಕಿದ್ದಂತೆ ಸತ್ಯಕ್ಕೆ ಜಲಪಾತದಂತೆ ಭೋರ್ಗರಿಸುವ ಗುಣವಿದೆ.


Prop. : *Kishore Kumar Kedige* Ph. : 2231524 M. : 9880726325
**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

**ರಾಮಾ ಅಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O) 2212723 (R) M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

**RAJESH POWER PRESS**
The RIGHT Place for the Customer
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 322386
E-mail : msraghunathrao@hotmail.com

**PREETHIKA AUTOMOBILES**
2493633
9845851573
*Wholesale & Retail Dealers in :*
*2 & 3 WHEELERS, SPARES & ACCESSORIES*
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils

# ** ಅಪಾರ ಕೀರ್ತಿ ಗಳಿಸಿ **



**ಕುಮಾರಿ ಭೂಮಿಕಾ** ಈ ಬಾರಿಯ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 600/600 ಅಂಕಗಳಿಸಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಮೂಡುಬಿದಿರೆ ಪುತ್ತಿಗೆಯ ಶ್ರೀ ಶ್ರೀನಿವಾಸ್ ರಾವ್ ಮತ್ತು ಶ್ರೀಮತಿ ಮಮತಾರವರ ಸುಪುತ್ರಿ ಹಾಗೂ ಮೂಡುಬಿದಿರೆಯ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿನಿ.



**ಚಿ| ಪ್ರಜ್ವಲ್ ಕುಮಾರ್** ಈ ಬಾರಿಯ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 586/600 ಅಂಕಗಳಿಸಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ರಾಷ್ಟ್ರೀಯ ಸ್ಕೇಟಿಂಗ್ ಆಟಗಾರನಾಗಿದ್ದು ಮೈಸೂರಿನ ಶ್ರೀ ಬಾಲಕೃಷ್ಣ ಪಿ. ಮತ್ತು ಶ್ರೀಮತಿ ಸುಮಂಗಲಾರವರ ಸುಪುತ್ರ.



**ಚಿ| ಸೃಜನ್ ರಾವ್** ಈ ಬಾರಿಯ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 586/600 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ನಂದಳಿಕೆ ಶ್ರೀ ಶಿವರಾಂ ರಾವ್ ಮತ್ತು ಶ್ರೀಮತಿ ನಳಿನಿ ರಾವ್‌ರವರ ಸುಪುತ್ರ.



**ಕುಮಾರಿ ರಚನಾ** ಈ ಬಾರಿಯ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 584/600 ಅಂಕಗಳಿಸಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ನವೀನ್ ಚೊಕ್ಕಾಡಿ ಮತ್ತು ಶ್ರೀಮತಿ ಶಾಲಿನಿಯವರ ಸುಪುತ್ರಿ ಹಾಗೂ ಬೆಂಗಳೂರಿನ ಕುಮಾರನ್ಸ್ ಕಾಲೇಜಿನ ವಿದ್ಯಾರ್ಥಿನಿ.



**ಕುಮಾರಿ ಮೇಘನಾ ಎಸ್.** ಈ ಬಾರಿಯ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 596/600 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಶ್ರೀಧರ ಕೆ. ಕೆ. ಮತ್ತು ಶ್ರೀಮತಿ ಸರಳಾರವರ ಸುಪುತ್ರಿ.




**ಕುಮಾರಿ ಪ್ರೇರಣಾ ರಾವ್** ಈ ಬಾರಿಯ ದ್ವಿತೀಯ ಪಿ.ಯು.ಸಿ. ಸಿ.ಬಿ.ಎಸ್.ಸಿ. ಪರೀಕ್ಷೆಯಲ್ಲಿ ಶೇ 94 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಅರಿಕ್ಕಳ ಶ್ರೀ ಪ್ರಶಾಂತ್ ರಾವ್ ಮತ್ತು ಶ್ರೀಮತಿ ಸೌಮ್ಯ ಪ್ರಶಾಂತ್‌ರವರ ಸುಪುತ್ರಿ.



**ಕುಮಾರಿ ಅಕ್ಷತಾ ಅರವಿಂದ** ಈ ಬಾರಿಯ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 596/600 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಬೆಂಗಳೂರಿನ ಶ್ರೀ ಅರವಿಂದ ಮತ್ತು ಶ್ರೀಮತಿ ಅಶ್ವಿನಿಯವರ ಸುಪುತ್ರಿ ಹಾಗೂ ಬೆಂಗಳೂರಿನ ಪ್ರಿಮಸ್ ಪಬ್ಲಿಕ್ ಸ್ಕೂಲ್‌ನ ವಿದ್ಯಾರ್ಥಿನಿ.



**ಕುಮಾರಿ ಕೀರ್ತನಾ ಹೆಬ್ಬಾರ್** ಈ ಬಾರಿಯ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 598/600 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಕಾರ್ಕಳದ ಶ್ರೀ ಶ್ರೀನಿವಾಸ್ ಹೆಬ್ಬಾರ್ ಮತ್ತು ಶ್ರೀಮತಿ ಮಲ್ಲಿಕಾ ಹೆಬ್ಬಾರ್‌ರವರ ಸುಪುತ್ರಿ ಹಾಗೂ ಕಾರ್ಕಳದ ಕ್ರೈಸ್ಟ್ ಕಿಂಗ್ ಪಿ.ಯು. ಕಾಲೇಜಿನ ವಿದ್ಯಾರ್ಥಿನಿ.



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬಂಟ್ವಾಳ – ವಿಟ್ಲ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಪದ್ಮನಾಭರಾಯರ ಮೊಮ್ಮಗಳು (ಪುತ್ರಿ ಶ್ರೀಮತಿ ವೀಣಾರವರ ಮಗಳು) **ಕು| ಅಪೂರ್ವ** ಇವಳು ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 621/625 ಅಂಕಗಳನ್ನು ಗಳಿಸಿದ್ದಾಳೆ. ಇವಳು ವಿಟ್ಲದ ಜೇಸಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿಯಾಗಿರುತ್ತಾಳೆ.



**ಚಿ| ಅನಿರುದ್ಧ ವಿ. ರಾವ್** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 618/625 ಶೇ 99 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಮಂಗಳೂರಿನ ಕದ್ರಿಯ ಶ್ರೀ ಯು. ಎಸ್. ವಿವೇಕ್ ರಾವ್ ಮತ್ತು ಶ್ರೀಮತಿ ಕಲಾನಿಧಿಯವರ ಸುಪುತ್ರ ಹಾಗೂ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ವಿದ್ಯಾರ್ಥಿ.

## ಪದೋನ್ನತಿ



ಶ್ರೀ ಯು. ಜಿ. ಸುರೇಶ್ ರಾವ್‌ರವರ ಧರ್ಮಪತ್ನಿ **ಶ್ರೀಮತಿ ವತ್ಸಲಾ ಕುಮಾರಿ**ಯವರು ಕರ್ನಾಟಕ ಸರಕಾರದ ವಿತ್ತ ಇಲಾಖೆಯ ಜೊತೆಕಾರ್ಯದರ್ಶಿಯಾಗಿ ಪದೋನ್ನತಿ ಹೊಂದಿದ್ದಾರೆ.



**ಶ್ರೀ ವಿಕಾಸ್ ರಾವ್** ಅಮೇರಿಕದ ಯುನಿವರ್ಸಿಟಿ ಆಫ್ ಉತಾಹ್, ಸಾಲ್ಟಲೇಕ್ ಸಿಟಿಯ ಕಂಪ್ಯೂಟರ್ ಇಂಜಿನಿಯರಿಂಗ್ ವಿಭಾಗದಲ್ಲಿ ಪಿ.ಎಚ್.ಡಿ. ಗಳಿಸಿದ್ದಾರೆ. ಇವರು ಕಟೀಲು ಶ್ರೀ ಕುಮಾರ್ ರಾವ್ ಮತ್ತು ಶ್ರೀಮತಿ ನೀರೇಬೈಲೂರು ವಿದ್ಯಾವತಿ ರಾವ್‌ರವರ ಸುಪುತ್ರ.

## ಶ್ರೀಮತಿ ಚೇತನಾ ರಮೇಶ ರಾವ್‌ರವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬಂಟ್ವಾಳ ವಲಯ – ವಿಟ್ಲ ಇದರ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿ ಸಭಾ ಹಾಗೂ ಸಮಾಜದ ಚೇತನವೇ ಆಗಿರುವ **ಶ್ರೀಮತಿ ಚೇತನಾ ರಮೇಶ್ ರಾವ್**ರವರಿಗೆ ಈ ಬಾರಿಯ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿಯು ಅರಸಿ ಬಂದಿದ್ದು ನಮ್ಮ ಸಮಾಜಕ್ಕೆ ಹೆಮ್ಮೆಯ ವಿಷಯವಾಗಿರುತ್ತದೆ. ಶ್ರೀಮತಿ ಚೇತನಾ ರಮೇಶ್ ರಾವ್‌ರವರಿಗೆ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬಂಟ್ವಾಳ ವಲಯ – ವಿಟ್ಲದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.


**PRAVEEN KUMAR ADYAPADY**
**NOTARY & ADVOCATE**
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)


ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ರೊಲ, ಬಿ.ಎ., ಎಲ್‌ಎಲ್.ಬಿ.**
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services

1st Floor, Bharath Building, P. M. Rao Road, Hampankatta, Mangaluru - 575 001

## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಶ್ರೀ ಪರಮೇಶ್ವರ ರಾವ್ ಮತ್ತು ಶ್ರೀಮತಿ ಅನುರಾಧರವರ ಸುಪುತ್ರ **ಚಿ। ಅಭಿಷೇಕ ರಾವ್**ರವರ ವಿವಾಹವು ಶ್ರೀ ಎಸ್. ಕೃಷ್ಣಾನಂದ ಮತ್ತು ಶ್ರೀಮತಿ ಅನಿತಾರವರ ಸುಪುತ್ರಿ **ಚಿ। ಸೌ। ಅನನ್ಯ**ರೊಂದಿಗೆ ತಾ. 21–8–2021ನೇ ಶನಿವಾರ ಬೆಂಗಳೂರಿನ ಕೂಡಿಗೆಹಳ್ಳಿಯ ಜ್ಞಾನಶಕ್ತಿ ಮಂಟಪದಲ್ಲಿ ನೆರವೇರಿತು.

## ಭಜನಾ ಪರಿಕರಗಳ ರಕ್ಷಣೆಗೆ ಕಪಾಟಿನ ಕೊಡುಗೆ



ಭಜನೆಯಿಂದ ವಿಭಜನೆ ಇಲ್ಲ

ಶ್ರೀ ಶಾರದಾಂಬಾ ಭಜನಾ ಮಂಡಳಿ, ಸುಬ್ರಹ್ಮಣ್ಯ ಸಭಾದ ಭಜನೆಯ ಪರಿಕರಗಳನ್ನು ಇಡಲು 'ಅಲ್ಮೇರಾ' (ಕಪಾಟು)ವನ್ನು ಬೆಂಗಳೂರಿನ ಶ್ರೀ ರವೀಂದ್ರನಾಥ ರಾವ್ ಬೆಳ್ಳೆ ದಂಪತಿಯವರು ಮತ್ತು ಶ್ರೀ ನಂದಿಕೂರು ಜನಾರ್ದನ ರಾವ್‌ರವರು ನೀಡಿದ್ದಾರೆ. ಭಜನಾ ಮಂಡಳಿಯ ಕುಸುಮಾ ನವೀನ್ ಕುಮಾರ್, ಪುಷ್ಪಾವತಿ ಶ್ರೀನಿವಾಸ್ ರಾವ್, ಸ್ನೇಹಲತಾ ದಿವಾಕರ ಇದನ್ನು ಸ್ವೀಕರಿಸಿ ಧನ್ಯವಾದ ನೀಡಿದರು.

## ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ನೇತೃತ್ವದಲ್ಲಿ ದಿನಸಿ ಕಿಟ್ ವಿತರಣೆ



ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ನೇತೃತ್ವದಲ್ಲಿ ದ. ಕ. ಜಿಲ್ಲೆಯ ಬಂಟ್ವಾಳ, ಪುತ್ತೂರು, ಸುಳ್ಯ, ಮೂಡುಬಿದಿರೆ, ಸುರತ್ಕಲ್, ಬೆಳ್ತಂಗಡಿ ಸಂಘಗಳ ಸಹಕಾರದಿಂದ ಬಡ ಬ್ರಾಹ್ಮಣ ಕುಟುಂಬಗಳಿಗೆ ಸುಮಾರು ರೂ. 1,000/– ಮೌಲ್ಯದ 67 ಕಿಟ್‌ಗಳನ್ನು ವಿತರಿಸಲಾಯಿತು. ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಶ್ರೀ ಸಚ್ಚಿದಾನಂದಮೂರ್ತಿ, ನಿರ್ದೇಶಕರುಗಳಿಗೆ, ನಮ್ಮ ಭಾಗದ ಪ್ರಭಾರಿ ಶ್ರೀ ರಾಜೇಶ್ ನಡ್ವಂತಿಲ್ಲಾಯ, ವಿಪ್ರ ಸಮಾಗಮ ಅಧ್ಯಕ್ಷರಾದ ಶ್ರೀ ರಾಮಕೃಷ್ಣ ರಾವ್ ಹಾಗೂ ಸಹಕರಿಸಿದ ಸರ್ವರಿಗೂ ವಂದನೆಗಳು.

*ವರದಿ : ಪಿ. ಶ್ರೀಕಾಂತ್ ರಾವ್*

## ಡಾ। ಬಿ. ಬಾಲಕೃಷ್ಣ ರಾವ್ ಇವರಿಗೆ ಸನ್ಮಾನ



ಡಾ। ಬಿ. ಬಾಲಕೃಷ್ಣ ರಾವ್ ಇವರು ಸದ್ಯ ಬೆಳ್ಮಣ್ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಾ ಇದ್ದಾರೆ. ಇವರು ಬೆಳ್ಮಣ್ಣಿನ ದಿವಂಗತ ಬೈಲುಮನೆ ದೇವರಾವ್ ಹಾಗೂ ಶಚೀದೇವಿಯವರ ಸುಪುತ್ರ. ಇವರ ಶ್ಲಾಘನೀಯ ಸೇವೆಯಿಂದಾಗಿ ಬೆಳ್ಮಣ್ ಪ್ರಾಥಮಿಕ ಆರೋಗ್ಯ ಕೇಂದ್ರವು ಮಾದರಿ ಆರೋಗ್ಯ ಕೇಂದ್ರವಾಗಿ ಹೆಸರುಗಳಿಸಿದೆ. ಇತ್ತೀಚೆಗೆ ಕಾರ್ಕಳದಲ್ಲಿ ಕರ್ನಾಟಕ ಸರಕಾರದ ಆರೋಗ್ಯ ಸಚಿವರಾದ ಡಾ। ಸುಧಾಕರ್‌ರವರಿಂದ ಉತ್ತಮ ಸೇವೆಗಾಗಿ ಸನ್ಮಾನಿತರಾಗಿದ್ದಾರೆ. ಇವರು ನಮ್ಮ ಸಮಾಜದ ಹೆಮ್ಮೆಯ ಪುತ್ರರಾಗಿದ್ದಾರೆ.

## ಶ್ರೀ ಸಭಾದಲ್ಲಿ ಉಪಾಕರ್ಮ




ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ವತಿಯಿಂದ 'ಉಪಾಕರ್ಮ' ವೇದಮೂರ್ತಿ ಪಾವಂಜೆ, ಜಗದೀಶ ಉಪಾಧ್ಯಾಯ ಮತ್ತು ಸಹೋದರರ ಮುಖೇನ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನಡೆಯಿತು. ಶ್ರೀ ಸಭಾದ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

## ದೇವಸ್ಥಾನದ ಮುಖ್ಯದ್ವಾರ ಉದ್ಘಾಟನೆ



ಪಡುಬಿದ್ರೆ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ ಉದಯಾದ್ರಿ ಇದರ ಕಾರ್ಕಳ ರಸ್ತೆಯ ಪಕ್ಕದಲ್ಲಿ ನಿರ್ಮಾಣಗೊಂಡಿರುವ ಮುಖ್ಯ ದ್ವಾರವನ್ನು ತಾರೀಕು 16–08–2021ರಂದು ಕಾಪು ಕ್ಷೇತ್ರದ ಶಾಸಕರಾದ ಶ್ರೀ ಲಾಲಾಜಿ ಆರ್. ಮೆಂಡನ್‌ರವರು ಉದ್ಘಾಟನೆ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಶ್ರೀ ಶಶಿಕಾಂತ ಪಡುಬಿದ್ರೆ, ಮಾಜಿ ತಾಲೂಕು ಪಂಚಾಯತ್ ಸದಸ್ಯರಾದ ನೀತಾ ಗುರುರಾಜ, ದ್ವಾರದ ದಾನಿಯವರಾದ ಶ್ರೀ ಶೇಖರ್ ಶೆಟ್ಟಿ, ದೇವಸ್ಥಾನ ಅರ್ಚಕರಾದ ಶ್ರೀ ಜಗದಾಭಿರಾಮಸ್ವಾಮಿ, ಶ್ರೀ ನಯನಾಭಿರಾಮಸ್ವಾಮಿ, ಶ್ರೀ ನರೇಂದ್ರ ಸ್ವಾಮಿ, ಕಾರ್ಯದರ್ಶಿ ಶ್ರೀ ಶ್ರೀನಿವಾಸ ಶರ್ಮ, ಶ್ರೀ ಪಿ. ಡಿ. ಶೇಖರ್ ರಾವ್, ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರೆ ಇದರ ಗೌರವ ಅಧ್ಯಕ್ಷರಾದ ಶ್ರೀ ವಾಸುದೇವ ರಾವ್, ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ್ ರಾವ್, ಉಪಾಧ್ಯಕ್ಷರಾದ ಶ್ರೀ ರಾಮ ರಾವ್, ಶ್ರೀ ದಿವಾಕರ್ ರಾವ್, ಶ್ರೀಮತಿ ಶಶಿಕಲಾ ಚಂದ್ರಶೇಖರ್ ರಾವ್, ಶ್ರೀ ಗೋವಿಂದ ರಾವ್, ಶ್ರೀ ನಂದಿಕೂರು ರಾಜಶೇಖರ ರಾವ್ ಹೆಜಮಾಡಿ ಉಪಸ್ಥಿತರಿದ್ದರು.


ಪತ್ರಿಕೆಗೆ ಶುಭ ಬಯಸುವ–



**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಮೌರಿಷ್ಠ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ**
**ಕದ್ರಿ, ಮಂಗಳೂರು - 575 003**

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
**ಪ್ರಮೋದ್ ಟವರ್ಸ್, ಮಂಗಳೂರು**

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

ಶ್ರೀಮತಿ ವಿದ್ಯಾ ರಾವ್ ಬೆಂಗಳೂರು, ಶ್ರೀಮತಿ ಉಷಾ ರಾವ್ ಹೊಸಪೇಟೆ, ಶ್ರೀಮತಿ ಶೋಭಾ ಚಂದ್ರಶೇಖರ್ ಬೆಂಗಳೂರು ಇವರು ಬೆಳ್ಳೆ ರಾಮರಾವ್ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 30,000/- ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ವಿಕಾಸ ಕವಿ ಶ್ರೀ ಬಿ. ವಿ. ರಾವ್, ಬೆಂಗಳೂರು ಪ್ರತಿ ತಿಂಗಳು ರೂ. 10,000/- ದಂತೆ ಕಳೆದ 4 ತಿಂಗಳಿಂದ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ಕ್ಕೆ ನೀಡುತ್ತಿದ್ದು ಇನ್ನು ಮುಂದೆಯೂ ಮುಂದುವರಿಸುವುದಾಗಿ ತಿಳಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

## ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳ್ಯಾ

**C/o. ಕೆ. ಸದಾಶಿವ ಶಾಸ್ತ್ರಿ 3 - 68(7)**
**ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳ್ಯಾ - 575 019**
**ಮೊಬೈಲ್ : 8762235801**

### * ಪ್ರತಿಭಾ ಪುರಸ್ಕಾರ *

2020–21ರ ಸಾಲಿನ ಶೈಕ್ಷಣಿಕ ವರ್ಷದ ಪ್ರೌಢಶಾಲಾ (S.S.L.C) ಮತ್ತು ಪದವಿ ಪೂರ್ವ ಶಿಕ್ಷಣದ ಅಂತಿಮ ಪರೀಕ್ಷೆಯಲ್ಲಿ (P.U.C.) ವಿಶಿಷ್ಟ ಶ್ರೇಣಿಯಲ್ಲಿ (85% ಅಧಿಕ) ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಮಂಗಳೂರು ಬಿಜೈರಸ್ತೆಯ ಕರಂಗಲ್ಪಾಡಿ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಮುಂಬರುವ ದಿನಗಳಲ್ಲಿ ನಡೆಯುವ ಯಾವುದೇ ಕಾರ್ಯಕ್ರಮದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಗುವುದು. ದ.ಕ. ಮತ್ತು ಉಡುಪಿ ಜಿಲ್ಲಾ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕಪಟ್ಟಿಯ ಯಥಾನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ತಾ. 30–9–2021ರ ಒಳಗಾಗಿ ಮೇಲ್ಕಾಣಿಸಿದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**ಕೆ. ಸದಾಶಿವ ಶಾಸ್ತ್ರಿ**
**ಮೊಬೈಲ್ : 8762235801**

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ

### ಬಂಟ್ವಾಳ ವಲಯ, ವಿಟ್ಲ



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬಂಟ್ವಾಳ ವಲಯ, ವಿಟ್ಲ ಇವರಿಂದ ಪ್ರಾಯೋಜಿತವಾಗಿರುವ 'ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ, ಬಂಟ್ವಾಳದ ಮೂಲಕ ಸ್ಥಾನಿಕ ಬ್ರಾಹ್ಮಣ ಸಮಾಜದ ಗುರುಭವನ ಹಾಗೂ ಸಮುದಾಯ ಭವನ ನಿರ್ಮಾಣವು ಸಮಾಜ ಬಾಂಧವರ ಬಹುದಿನಗಳ ಅಪೇಕ್ಷೆಯಾಗಿರುತ್ತದೆ.

ಇದನ್ನು ಸಾಕಾರಗೊಳಿಸುವುದಕ್ಕಾಗಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬಂಟ್ವಾಳ ವಲಯ, ವಿಟ್ಲ ಇದರ 2019ರಂದು ನಡೆದ ಮಹಾಸಭೆಯಲ್ಲಿ ಪ್ರಸ್ತಾಪನೆ ಮಾಡಿದ ಸಂದರ್ಭದಲ್ಲಿ, ಶ್ರೀಯುತ ರಮೇಶರಾಯರು ಕಾವಳಕಟ್ಟೆ ಇವರು ತಮ್ಮ ಹಿರಿಯರು ತಮಗೆ ನೀಡಿದ ಜಮೀನಿನಲ್ಲಿ ಸ್ವಲ್ಪ ಜಮೀನನ್ನು ಸಮಾಜದ ಅಭಿವೃದ್ಧಿಗಾಗಿ ನೀಡುವುದಾಗಿ ವಾಗ್ದಾನ ಮಾಡಿದ್ದು, ಅದರಂತೆ ತಮ್ಮ ಜಮೀನಿನಲ್ಲಿ 23 ಸೆಂಟ್ಸ್ ನಿವೇಶನ ನೀಡಿದ್ದು, ಜಮೀನು ಅಳತೆ ಮಾಡುವ ಸಂದರ್ಭದಲ್ಲಿ, ಹೆಚ್ಚುವರಿ ಬೇಕಾಗುವ ಜಮೀನನ್ನು ಅವರ ಸಹೋದರ ಶ್ರೀಯುತ ಸಂತೋಷರಾಯರು ಸೇರಿ ಒಟ್ಟು 38 ಸೆಂಟ್ಸ್ ನಿವೇಶನವನ್ನು ದಾನವಾಗಿ ಸಭಾಕ್ಕೆ ನೀಡಿದ್ದು, ಈ ಬಗ್ಗೆ ಸಭಾವು ನಿರ್ಣಯಿಸಿದಂತೆ 18 ಜನರ ಟ್ರಸ್ಟ್‌ನ್ನು ನೋಂದಣಿ ಮಾಡಿ ನಿವೇಶನವನ್ನು ಪ್ರತಿಷ್ಠಾನದ ಹೆಸರಲ್ಲಿ ನೋಂದಾಯಿಸಲಾಗಿರುತ್ತದೆ. ಮುಂದಿನ ಹಂತದಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾಜದ ಶಕ್ತಿಕೇಂದ್ರದ ಸ್ಥಾಪನೆ ಹಾಗೂ ಸದುದ್ದೇಶಗಳು ಬೇಗನೆ ಈಡೇರಲು, ಸಮಾಜ ಬಾಂಧವರ ಸಹಕಾರವನ್ನು ಬಯಸುತ್ತೇವೆ.

ನಿವೇಶನ ನೋಂದಣಿಗಾಗಿ ಸಹಕರಿಸಿದ ನಮ್ಮ ಸಮಾಜದ ಗೌರವಾನ್ವಿತ ನೋಟರಿಯವರಾದ ಶ್ರೀಯುತ ರವಿಕಿರಣ ಕೊಯಿಲ ಹಾಗೂ ಸ್ಥಳದಾನ ಮಾಡಿರುವ ಶ್ರೀಯುತ ರಮೇಶ ರಾವ್ ಮತ್ತು ಶ್ರೀಯುತ ಸಂತೋಷ್ ಕಾವಳಕಟ್ಟೆ ಮತ್ತವರ ಕುಟುಂಬ ವರ್ಗದವರಿಗೆ ಪರಮಾತ್ಮನು ಸಕಲೈಶ್ವರ್ಯವನ್ನು ಮತ್ತು ಆರೋಗ್ಯವನ್ನು ಕರುಣಿಸಲೆಂದು ಪ್ರಾರ್ಥನೆ. ಈ ಸಂದರ್ಭದಲ್ಲಿ ಸಭಾದ ಗೌರವಾಧ್ಯಕ್ಷರು ಶ್ರೀಯುತ ಅನಾರು ಕೃಷ್ಣ ಶರ್ಮ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಯುತ ಭವಾನಿಶಂಕರ ರಾವ್ ಕೇದಗೆ ಹಾಗೂ ಟ್ರಸ್ಟಿ ಶ್ರೀಯುತ ದಿನೇಶ ರಾವ್ ನೆಟ್ಲಮುಂಡಾಜೆ ಹಾಜರಿದ್ದರು.

**ಅಧ್ಯಕ್ಷರು ಮತ್ತು ಸರ್ವ ಸದಸ್ಯರು**
**ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬಂಟ್ವಾಳ ವಲಯ, ವಿಟ್ಲ**

Prop. : P. Srikanth Rao Mobile : 9343361618
M/s. SAMARPAN
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4





Muralidhara Rao Adyapadi
Proprietor
Mob : 94480 27259
99803 16434

SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.
N. LAXMI PRASAD
ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –
G. K. KOLPE
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

# ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಮಂಗಳೂರು ಶಕ್ತಿನಗರ ನಿವಾಸಿ **ಶ್ರೀಮತಿ ಟಿ. ಜಾನಕಿ** (78) ತಾ. 19-7-2021ನೇ ಸೋಮವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಮೂವರು ಪುತ್ರರು, ಮೂವರು ಪುತ್ರಿಯರ ಸಹಿತ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

***



ಬೆಳ್ಳಾಯರು ನಿವಾಸಿ (ತೋಕೂರು) ರಾಮಚಂದ್ರ ರಾವ್‌ರವರ ಪತ್ನಿ **ಶ್ರೀಮತಿ ವತ್ಸಲಾ ಆರ್. ರಾವ್** (84) ಅವರು ತಾ. 7-7-2021ನೇ ಬುಧವಾರ ಸ್ವಗೃಹದಲ್ಲಿ ನಿಧನ ಹೊಂದಿದರು. ಇವರು ಓರ್ವ ಪುತ್ರ ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.

***



ಪಾರೆಂಕಿ ಭವಾನಿ ಅಧಿಕಾರಿಯವರ ಧರ್ಮಪತ್ನಿ **ಶ್ರೀಮತಿ ಶಾರದಾ** (84) ತಾ. 20-7-2021ನೇ ಮಂಗಳವಾರ ನಿಧನ ಹೊಂದಿದ್ದಾರೆ. ಅವರು ಓರ್ವ ಪುತ್ರಿ, ನಾಲ್ವರು ಪುತ್ರರು ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

***



**ಕರಂದಾಡಿ ಶ್ರೀ ಗಿರೀಶ ರಾವ್** (70) ತಾ. 20-7-2021ನೇ ಮಂಗಳವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಇಬ್ಬರು ಪುತ್ರಿಯರ ಸಹಿತ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

***



ಎಲ್ಲೂರು ಶ್ರೀ ಮೋಹನ ರಾವ್ ಇವರ ಧರ್ಮಪತ್ನಿ **ಶ್ರೀಮತಿ ಇಂದಿರಾ ರಾವ್** ಕರಾಡದಲ್ಲಿ ತಾ. 19-8-2021ನೇ ಗುರುವಾರ ನಿಧನ ಹೊಂದಿದರು.

***



**ಕರಾಡ ನಿವಾಸಿ ಶ್ರೀ ವಿಶ್ವೇಷ್ ಮೋಹನ್ ರಾವ್** (52) ತಾ. 19-8-2021ನೇ ಗುರುವಾರ ಕರಾಡದಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

***



ಸುರತ್ಕಲ್ ನಿವಾಸಿ ಶ್ರೀ ಎ. ಪಿ. ಕರುಣಾಕರ ಶರ್ಮರ ಧರ್ಮಪತ್ನಿ **ಶ್ರೀಮತಿ ಯಶೋದಾ ಶರ್ಮ** (71)ರವರು ತಾ. 14-8-2021ನೇ ಶನಿವಾರ ಸುರತ್ಕಲ್‌ನಲ್ಲಿ ನಿಧನ ಹೊಂದಿದರು. ಇವರು ಪತಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

---

**ಉಜಿರೆ ನಾರಾಯಣ ಭಟ್** (58) ಇವರು ತಾ. 21-8-2021ನೇ ಶನಿವಾರ ಹಾಸನದಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.




ಕಾಸರಗೋಡು ಪ್ರಸಿದ್ಧ ಕೂಡ್ಲು ಮನೆತನದ ಹಿರಿಯ ತಲೆಮಾರಿನ ಕೊನೆಯ ಕೊಂಡಿ ಚೇರ್ಕಲ್ ಏರೆಯಪ್ಪಾಡಿ ನಿವಾಸಿ **ಶ್ರೀ ಕೂಡ್ಲು ವಿಷ್ಣು ಶಾನುಭೋಗ** (89) ಮಂಗಳೂರಿನ ತಮ್ಮ ಮಗನ ಮನೆಯಲ್ಲಿ ತಾ. 30-7-2021ನೇ ಶುಕ್ರವಾರ ನಿಧನಹೊಂದಿದರು. ಇವರು ಮೂವರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಕೂಡ್ಲು ದೇವಸ್ಥಾನಗಳ ಅನುವಂಶೀಯ ಮೊಕ್ತೇಸರರಾಗಿದ್ದ ಅವರು ಕೊಡುಗೈ ದಾನಿಗಳಾಗಿದ್ದು ಶ್ರೀ ಸುಬ್ರಹ್ಮಣ್ಯ ಸಭಾದಲ್ಲೂ ಹಲವಾರು ವಿದ್ಯಾಭ್ಯಾಸ ನಿಧಿಗಳನ್ನು ಸ್ಥಾಪಿಸಿದ್ದಾರೆ. ಹಲವಾರು ದೇವಸ್ಥಾನಗಳ ಜೀರ್ಣೋದ್ಧಾರಗಳಿಗೆ ಧನಸಹಾಯ ನೀಡಿದ್ದು, ಸಂಗೀತ, ಯಕ್ಷಗಾನ, ನಾಟಕ ಕಲೆಗಳಲ್ಲೂ ತೊಡಗಿಸಿಕೊಂಡಿದ್ದರು.

***



**ಬೆಟ್ಟಂಪಾಡಿ ಶ್ರೀ ಶ್ರೀನಿವಾಸ್ ರಾವ್** (87) ತಾ. 30-8-2021ನೇ ಸೋಮವಾರ ಮೈಸೂರಿನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಇಬ್ಬರು ಪುತ್ರಿಯರು, ಒಬ್ಬ ಪುತ್ರ ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

***



**ಪಡುಬಿದ್ರೆ ಪಾದೆಬೆಟ್ಟು ಗಣೇಶ್ ಶಾನ್‌ಬಾಗ್** (85) ತಾ. 1-08-2021ನೇ ರವಿವಾರ ನಿಧನ ಹೊಂದಿದರು. ಅವರು ಧರ್ಮಪತ್ನಿ, ಮೂವರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



**ಶ್ರೀ ಪೊಳಲಿ ಅನಂತರಾಜ್ ರಾವ್** (54) ಇವರು ತಾ. 31-8-2021 ಮಂಗಳವಾರ ಮುಂಬಯಿಯಲ್ಲಿ ನಿಧನ ಹೊಂದಿದರು. ಇವರು ಧರ್ಮಪತ್ನಿ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

***



ಕೊಡವೂರು ಚಂದ್ರಶೇಖರ್ ರಾವ್‌ರವರ ಪತ್ನಿ **ಶ್ರೀಮತಿ ಸತ್ಯಭಾಮ ರಾವ್** (83) ತಾ. 14-8-2021ರ ಶನಿವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಇಬ್ಬರು ಪುತ್ರರು ಹಾಗೂ ಐವರು ಪುತ್ರಿಯರನ್ನು ಅಗಲಿದ್ದಾರೆ.

***



ಕಾಸರಗೋಡು ಮರ್ಥಂಬೈಲ್ ಶ್ರೀ ಎಂ. ಉಮೇಶ್ ರಾವ್‌ರವರ ಪತ್ನಿ **ಶ್ರೀಮತಿ ಸರಸ್ವತಿ ಯು. ರಾವ್** (72) ತಾರೀಕು 25-3-2021ರಂದು ಮರ್ಥಂಬೈಲ್‌ನಲ್ಲಿ ನಿಧನ ಹೊಂದಿದರು. ಇವರು ನಾಲ್ಕು ಜನ ಮಕ್ಕಳನ್ನು ಅಗಲಿದ್ದಾರೆ.

---


ಪತ್ರಿಕೆಗೆ ಶುಭ ಬಯಸುವ-



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Ozanam Complex, Church Building**
**Main Road, BAJPE, MANGALORE**



*We undertake all types of Electrical, Plumbing and Sanitary works*

ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
✆ : 9448043969
8861497325


**ಶಿವಗಿರಿ ಎಂಟರ್‌ಪ್ರೈಸಸ್**
**SHIVAGIRI ENTERPRISES**



ಪತ್ರಿಕೆಗೆ ಶುಭ ಬಯಸುವ-



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**



# ಶ್ರೀ ಶಂಕರಾಚಾರ್ಯರ ಮಾತು ಕೊರೋನಾ ಕಾಲದಲ್ಲಿ ಪ್ರಸ್ತುತ

ಒಳ್ಳೆಯ ವ್ಯಕ್ತಿಗಳಿಗೆ ಒಂದಾದ ಮೇಲೆ ಒಂದರಂತೆ ಕಷ್ಟಗಳು ಬರುತ್ತಿದ್ದರೆ ಅದು ಅವರ ಈ ಜನ್ಮದ್ದಲ್ಲ, ಹಿಂದಿನ ಜನ್ಮದ್ದಿರಬೇಕು ಎನ್ನುತ್ತಾರೆ. ತುಂಬಾ ಕೆಟ್ಟ ಕೆಲಸ ಮಾಡುತ್ತಿದ್ದವರಿಗೆ ಒಳ್ಳೆಯದಾಗುತ್ತಿದ್ದರೆ ಈಗೇನೂ ಚೆನ್ನಾಗಿದೆ. ಆದರೆ ಮುಂದಿನ ಜನ್ಮದಲ್ಲಾದರೂ ಶಿಕ್ಷೆ ಅನುಭವಿಸಿಯೇ ಅನುಭವಿಸುತ್ತಾರೆ ಎನ್ನುತ್ತೇವೆ. ಒಟ್ಟಿನಲ್ಲಿ ಹೇಳುವುದಾದರೆ ಹಿಂದಿನ, ಮುಂದಿನ, ಇಂದಿನ ಜನ್ಮದ ಕುರಿತು ನಮ್ಮ ಭಾರತೀಯರಲ್ಲಿ ಹಿಂದಿನಿಂದಲೂ ವಿಚಾರ ಚರ್ಚೆ ನಡೆಯುತ್ತಲೇ ಇದೆ. ಕರ್ಮದ ಆಧಾರದ ಮೇಲೆ ಪುನರ್ಜನ್ಮದ ಕಲ್ಪನೆ ಮೂಡುತ್ತದೆ.

'ಜನ್ಮ' ಎನ್ನುವುದು ಹೇಗೆಂದರೆ ಬೀಜ ಗಿಡವಾಗಿ ಮರವಾಗಿ ಮತ್ತೆ ಅದರ ಬುಡದಲ್ಲಿ ಹೊಸದೊಂದು ಚಿಗುರು ಚಿಗುರುವಂತೆ ಈ ಜನ್ಮ ಇದು ಪುನಃ ಪುನಃ ಸಂಭವಿಸುತ್ತಲೇ ಇರುತ್ತದೆ. ಶ್ರೀ ಶಂಕರಾಚಾರ್ಯರು ತಮ್ಮ ಪ್ರಸಿದ್ಧ **'ಮೋಹ ಮುದ್ಗರ'**ದಲ್ಲಿ ಹೀಗೆ ಹೇಳಿರುವರು.

ಪುನರಪಿ ಜನನಂ ಮರಣಂ । ಪುನರಪಿ ಜನನೀ ಜಠರೇ ಶಯನಮ್ ।
ಇಹ ಸಂಸಾರೇ ಬಹುದುಃಸ್ತಾರೆ ಕೃಪಯಾ ಪಾರೇ ಪಾಹಿ ಮುರಾರೇ ॥

ಜನನ, ಮರಣ, ತಾಯಿಯ ಗರ್ಭದಲ್ಲಿರುವುದು. ಇವು ಮನುಷ್ಯನಿಗೆ ಮತ್ತೆ ಮತ್ತೆ ಸಂಭವಿಸುತ್ತಲೇ ಇರುವವು. ನಾವು ಮಾಡುವ ಕೆಲಸವೇ ಮತ್ತೆ ಮತ್ತೆ ಹುಟ್ಟುವಿಕೆಗೆ ಕಾರಣ. ಕರ್ಮವೇ ಬಂಧನಕ್ಕೂ ಬಿಡುಗಡೆಗೂ ಮೂಲವಾಗಿರುತ್ತದೆ. ಇದು ಎಲ್ಲಿಯವರೆಗೆ ಮೋಕ್ಷ ಸಿಗುವವರೆಗೆ ಸರಿಯಾದ ಗುರು ಮೂಲಕ ಸ್ವಧರ್ಮವನ್ನು ಪಾಲಿಸುತ್ತಾ ಬಂದಾಗ ಜ್ಞಾನ ಪ್ರಾಪ್ತಿಯಾಗುವುದು. ಅದೇ ಮೋಕ್ಷಕ್ಕೆ ದಾರಿ ಎಂದು ಶ್ರೀ ಶಂಕರಾಚಾರ್ಯರು ತಿಳಿಸಿರುವರು. ಹುಟ್ಟಿದ ಮನುಷ್ಯ ಕರ್ಮದ ಮಾಯಾಜಾಲಕ್ಕೆ ಸಿಲುಕಲೇಬೇಕು. ಅವನು ಏನು ಕಾರ್ಯ ಮಾಡುವನೋ ಅದರ ಫಲ ಅನುಭವಿಸಲೇಬೇಕು. ಸಾಧು ಪುಣ್ಯಕರ್ಮದಿಂದ ಪುಣ್ಯಜೀವಿ ಆಗುವನು. ಆ ಸಾಧು ಪಾಪಕರ್ಮದಿಂದ ಪಾಪಜೀವಿ ಆಗುವನು. ಫಲಗಳನ್ನು ಅನುಭವಿಸಿದ ನಂತರ ಮತ್ತೆ ಈ ಲೋಕಕ್ಕೆ ಹಿಂದಿರುಗುವನು ಮತ್ತೆ ಕರ್ಮಗಳನ್ನು ಮಾಡುವನು ಎಂದು ಬೃಹದಾರಣ್ಯದ ಉಪನಿಷತ್ತಿನಲ್ಲಿದೆ. ನಮ್ಮದು ಏಳೇಳು ಜನ್ಮದ ಅನುಬಂಧ, ಮುಂದಿನ ಜನ್ಮದಲ್ಲಿಯೂ ನಮ್ಮ ಸಂಬಂಧ ಹೀಗೇ ಇರಲಿ ಎನ್ನುವ ಅನೇಕ ಸುದ್ದಿಗಳಿವೆ. ಅದನ್ನು ನಿತ್ಯ ಕೇಳುತ್ತಲೇ ಇರುತ್ತೇವೆ.

### ಆರೋಗ್ಯ + ಭಾಗ್ಯ = ಉತ್ತಮ ಜೀವನ :

ಸಕಲ ಭಾಗ್ಯಗಳಲ್ಲಿ ಸರ್ವಶ್ರೇಷ್ಠವಾದುದು ಆರೋಗ್ಯ. ಆರೋಗ್ಯವಿಲ್ಲದೆ ಇತರ ಏನೇ ಭಾಗ್ಯಗಳಿದ್ದರೂ ಎಲ್ಲವೂ ವ್ಯರ್ಥ ಹಾಗೂ ಅರ್ಥಹೀನ. ಆರೋಗ್ಯವನ್ನು ಉಳಿಸಿಕೊಳ್ಳುವ ಕಲೆ ಸುಲಭ ಮತ್ತು ಅಗ್ಗ. ಆದರೆ ಕಳೆದುಕೊಂಡ ಆರೋಗ್ಯವನ್ನು ಮತ್ತೆ ಪಡೆದುಕೊಳ್ಳುವುದು ಕಷ್ಟಕರ. ಈಗ ಇಡೀ ವಿಶ್ವಕ್ಕೆ ಹಾಗೂ ಅದರಲ್ಲೂ ನಮ್ಮ ದೇಶಕ್ಕೆ ಬಂದಿರುವ ಈ ಕೊರೋನಾ ಕಾಯಿಲೆ ಬಂದಿರುವುದು ಅನಿರೀಕ್ಷಿತ. ಇದು ದೇಶದ ವೈದ್ಯಕೀಯ ವ್ಯವಸ್ಥೆಗೆ ಸವಾಲೆಸೆದ ಕೋವಿಡ್‌ನಿಂದ ಪಾರಾಗಲು ಕಳೆದೊಂದು ವರ್ಷದಿಂದ ಪರಿಶ್ರಮವಹಿಸಲಾಗುತ್ತಿದೆ. ಮೊದಲು ಇದು ಬಂದಾಗ ಈ ಸೋಂಕಿನ ಬಗ್ಗೆ ಗೊತ್ತಿರಲಿಲ್ಲ. ಮಾಸ್ಕ್, ಪಿ.ಪಿ.ಇ. ಕಿಟ್ ಎನ್ನುವ ಶಬ್ದಗಳು ಅಪರಿಚಿತವಾಗಿದ್ದವು. ನೋಡುತ್ತಿದ್ದಂತೆ ಭಾರತ ದೇಶ ಈ ವಿಚಾರದಲ್ಲಿ ಜಗತ್ತೇ ಬೆರಗಾಗುವಂತಹ ಸಾಧನೆ ಮಾಡಿದೆ. ಸಾವು ನೋವುಗಳ ನಡುವೆಯೂ ವಿಪತ್ತಿನಿಂದ ಜನರನ್ನು ರಕ್ಷಿಸುವುದರಲ್ಲಿ ಬಹುಮಟ್ಟಿಗೆ ಯಶಸ್ಸು ಕಂಡಿದೆ. ಈ ಕೋವಿಡ್ ವಿಪತ್ತು ಇಡೀ ಜಗತ್ತನ್ನು ತಲ್ಲಣಗೊಳಿಸಿದೆ. ಕೊರೋನಾ ಸೋಂಕಿನ ವಿರುದ್ಧ ಸಂಘಟಿತ ಹೋರಾಟ ನಡೆಸಲಾಗುತ್ತಿದೆ. ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಔಷಧಗಳನ್ನು ಕಂಡುಹಿಡಿಯಲಾಗಿದೆ. ಲಸಿಕೆಯೂ ಬಂದಿದೆ. ಆದರೂ ಅದರ ಭಯ ಹೋಗಿಲ್ಲ. ವಿಕಾಸದ ಹಾದಿಯಲ್ಲಿ ಆಧುನಿಕ ಜಗತ್ತು ಬಹಳ ಮುಂದೆ ಬಂದಿದೆ. ಆದರೆ ಪ್ರಕೃತಿಯನ್ನು ಗೆಲ್ಲಲು ಯಾರಿಂದಲೂ ಸಾಧ್ಯವಿಲ್ಲ ಎನ್ನಬಹುದು.

### ಮರೆಯಾಗುತ್ತಿರುವ 'ಸಂಬಂಧಗಳು' ( ಈ ಸಾವು ನ್ಯಾಯವೇ?)

ದೀರ್ಘವಾದ ಪ್ರಮಾಣದ ಸಮಯದಲ್ಲಿ ವರ-ವಧುವಿನ ಮನೆಗೆ ಹೋದಾಗ, ವಧು-ವರನ ಮನೆಗೆ ಹೋದಾಗ, ಹೊಸ ಸ್ನೇಹಿತರ ಪರಿಚಯವಾದಾಗ, ಶುಭ ಸಮಾರಂಭಗಳಲ್ಲಿ ಹೀಗೆ ಅನೇಕ ಸಂದರ್ಭದಲ್ಲಿ ನಮ್ಮ ಅವರ ಸಂಬಂಧಗಳ ವಿನಿಮಯ ಬರುವುದು ಸಹಜ. ಈಗ ಬಂದಿರುವ ಕೋವಿಡ್‌ನಿಂದಾಗಿ ಎಲ್ಲಾ ಸಂಬಂಧಗಳಿಗೆ ಅರ್ಥವೇ ಇಲ್ಲವಾಗಿದೆ. ಒಂದೇ ಮನೆಯಲ್ಲಿ ಅಪ್ಪ, ಅಮ್ಮ, ಮಕ್ಕಳಿಂದ ಹಿಡಿದು ಎಲ್ಲರೂ ಕೊರೋನಾದಲ್ಲಿ ನರಳುತ್ತಿರುವಾಗ ಅವರನ್ನು ಕುಟುಂಬದವರಿಂದ ಬೇರೆ ಇಡಲಾಗಿದೆ. ಅಕಸ್ಮಾತ್ ಯಾರಾದರೂ ವಿಧಿವಶರಾದರೆ ತಾಯಿಯನ್ನು ಮಕ್ಕಳು, ಮಗುವನ್ನು ತಾಯಿ, ಗಂಡನನ್ನು ಹೆಂಡತಿ, ಹೆಂಡತಿಯನ್ನು ಗಂಡ ನೋಡಲಾಗದು, ಮುಟ್ಟಲಾಗದು ಎಂಬ ಸನ್ನಿವೇಶ ಬಂದಿದೆ.

ಈ ಸಂಬಂಧಗಳು ಈಗ ಎಲ್ಲಿಗೆ ಹೋಯಿತು? ಇಷ್ಟಲ್ಲದೆ ಚಿತಾಗಾರಗಳಲ್ಲಿ ಯಾರಯಾರನ್ನೋ ಸುಡುತ್ತಿದ್ದರೆ, ಸ್ಮಶಾನಗಳಲ್ಲಿ ಯಾರಯಾರನ್ನೋ ಹೂಳುತ್ತಿದ್ದಾರೆ. ಸತ್ತವರ ಮುಖವನ್ನು ನೋಡದ ಪರಿಸ್ಥಿತಿ ಇರುವಾಗ ಅಂತಿಮ ದರ್ಶನ ಮಾಡುವುದು, ಹೆಣಕ್ಕೆ ಹೆಗಲು ಕೊಡುವುದು ಇದು ಯಾವುದೂ ಈಗ ಸಾಧ್ಯವಾಗುತ್ತಿಲ್ಲ. ಅಲ್ಲದೆ ಮಕ್ಕಳ ಸಾವನ್ನು ಹಿರಿಯರು ಕಾಣಬೇಕಾಗಿ ಬಂದಿದೆ. ಒಂದು ಸಮಾಜದಲ್ಲಿ ಒಬ್ಬರೋ ಇಬ್ಬರೋ ದುಃಖಿತನಾದರೆ ಉಳಿದವರು ಆತನ ನೆರವಿಗೆ ಬರಬಹುದು. ಆದರೆ ಎಲ್ಲರೂ ಒಂದೇ ಸಮಯದಲ್ಲಿ ದುಃಖಿಗಳಾದರೆ ಯಾರು ಯಾರನ್ನು ಸಂತೈಸಬೇಕು? ಈ ಕೊರೋನಾ ಸಮಯದಲ್ಲಿ ಶೋಕಿಸಲು 'ನನ್ನವರು ಯಾರು ಇಲ್ಲಾ...' ಎಂಬ ಸ್ಥಿತಿ ಒದಗಿ ಬಂದಿದೆ. ಗಂಡ ಸತ್ತ ಒಂದೆರಡು ದಿನದಲ್ಲಿ ಹೆಂಡತಿ ಸತ್ತಿದ್ದಾಳೆ. ಮಗ ಸತ್ತನೆಂದು ಹೃದಯಾಘಾತದಿಂದ ತಂದೆ ಸತ್ತಿದ್ದಾರೆ. ಆಸ್ಪತ್ರೆಯಲ್ಲಿ ಹೆಂಡತಿ ಸತ್ತಿದ್ದರೆ, ಮನೆಯಲ್ಲಿ ಗಂಡನಿಗೆ ಅದು ತಿಳಿದೇ ಇರುವುದಿಲ್ಲ. ದುಃಖದ ಸಂಗತಿ ಎಂದರೆ ಮನೆ ಅಂಗಳದಲ್ಲಿ ಹಿರಿಯರ ಶವ ಇದೆ. ಒಳಗೆ ಮಕ್ಕಳು ಕೋವಿಡ್‌ನಿಂದ ಮಲಗಿದ್ದಾರೆ. ಯಾರು ಯಾರಿಗೆ ಶೋಕಿಸುವುದು.

ಮಹಾಭಾರತದ ಯುದ್ಧ ಮುಗಿದ ನಂತರ ತನ್ನ ನೂರು ಮಕ್ಕಳ ಸಾವಿಗೆ ಕಾರಣನಾದ ಎಂಬ ಸಿಟ್ಟಿನಿಂದ ಗಾಂಧಾರಿ ಕೃಷ್ಣನಿಗೆ 'ನೀನೂ ನಿನ್ನ ಮಕ್ಕಳ ಮರಣವನ್ನು ಕಾಣುವಂತಾಗಲಿ' ಎಂಬ ಶಾಪ ಕೊಡುತ್ತಾಳೆ, ಮುಂದೆ ದಾಯಾದಿ ಕಲಹದಿಂದ ಮಕ್ಕಳು ತನ್ನ ಕಣ್ಣೆದುರೇ ಇಲ್ಲವಾಗುವುದನ್ನು ಕೃಷ್ಣ ನೋಡುತ್ತಾನೆ. ಅದೇ ರೀತಿ ಈಗ ಕೋವಿಡ್ ವಿಷಯದಲ್ಲೂ ಆಗಿದೆ. ಮೃತ್ಯು ಬಗ್ಗೆ ಡಿ.ವಿ.ಜಿ.ಯವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಈ ರೀತಿ ಹೇಳಿರುವರು.

ಸತ್ತನೆಂದೆನಬೇಡ, ಸೋತೆನೆಂದೆನಬೇಡ ।
ಬತ್ತಿತೆನ್ನೊಳು ಸತ್ತ್ವದೊಡೆಯೆನಬೇಡ ॥
ಮೃತ್ಯುವೆನ್ನುವುದೊಂದು ತೆರೆಮಿಳಿತ, ತೆರೆಯೇರು ।
ಮತ್ತೆ ತೋರ್ಪುದು ನಾಳೆ

ಅಯ್ಯೋ, ಅಪ್ಪಾ ನಾನು ಸತ್ತು ಸುಣ್ಣವಾಗಿ ಹೋಗಿದ್ದೇನೆ ಜೀವನದಲ್ಲಿ ಸಂಪೂರ್ಣವಾಗಿ ಸೋತು ಹೋಗಿದ್ದೇನೆ. ನನ್ನ ಸತ್ತ್ವದ ಬಲವೂ ಪೂರ್ತಿಯಾಗಿ ಬತ್ತಿಹೋಗಿದೆ ಎಂದು ಗೋಳಾಡಬೇಡ. 'ಮೃತ್ಯು' ಎನ್ನುವುದು ಸಮುದ್ರದಲ್ಲಿ ಒಂದು ಅಲೆ ಕೆಳಕ್ಕೆ ಬಿದ್ದಂತೆ ಅಷ್ಟೆ. ಆ ಅಲೆ ಪುನಃ ಮೇಲಕ್ಕೇಳುತ್ತದೆ. ಅಲ್ಲಿಯವರೆಗೆ ತಾಳ್ಮೆಯಿಂದ ಇರು. ಈ ಹುಟ್ಟು ಸಾವು ಜೀವನಚಕ್ರ ಇದು ನಿರಂತರ ನಡೆಯುತ್ತಲೇ ಇರುತ್ತದೆ. ನಾನು ಇತ್ತೀಚೆಗೆ ತುಮಕೂರು ಸಮೀಪ ಇರುವ 'ಗುಬ್ಬಿ' ಎಂಬ ಊರಿನಲ್ಲಿರುವ 'ಚಿದಂಬರ ಆಶ್ರಮ'ಕ್ಕೆ ಹೋಗಿದ್ದೆ. ಅಲ್ಲಿ ಹಿರಿಯ ವ್ಯಕ್ತಿ ಅಂದರೆ ಸುಮಾರು ತೊಂಬತ್ತೈದು ವರ್ಷದ ವಯೋವೃದ್ಧರು ಆಶ್ರಮದ ಮುಖ್ಯಸ್ಥರು. ಅವರ ಹತ್ತಿರ ಈ ಕೊರೋನಾ ಬಗ್ಗೆ ಮಾತನಾಡುವಾಗ ಹಿಂದೆ ಅವರು ನೋಡಿದ ಘಟನೆ ತಿಳಿಸಿದರು. ಹಿಂದೆ ಪ್ಲೇಗ್ ಬಂದು ಸಾವಿರಾರು ಜನ ಮರಣ ಹೊಂದಿದರಂತೆ. ಅಲ್ಲಿ ಶೋಕದ ಪ್ರಶ್ನೆಯೇ ಬರಲಿಲ್ಲ. ಅದಲ್ಲದೆ ಉಳಿದ ಒಬ್ಬ ವ್ಯಕ್ತಿ ಇದ್ದರಲ್ಲ ಅವರಿಗೆ (ಮಹಿಳೆ) ಇಪ್ಪತ್ತು ಜನ ಮಕ್ಕಳು ಹುಟ್ಟಿದರಂತೆ, ಕಾಲಾನಂತರ ಈ ಸಾವು ಎನ್ನುವುದು ಇದೇ ರೀತಿ ಪುನರಪಿ ಮರಣಂ ಪುನರಪಿ ಜನನಂ ಎಂದು ಪ್ರಕೃತಿಯನ್ನು ಗೆಲ್ಲಲು ಯಾರಿಂದಲೂ ಸಾಧ್ಯವಿಲ್ಲ. ಪ್ರಕೃತಿಯ ಮಡಿಲಲ್ಲಿ ಆರಾಮವಾಗಿ ಜೀವಿಸುವುದು ಸುಖ, ಸಮಯ ಕೆಟ್ಟದ್ದಾದರೆ ದುಃಖ ಇದ್ದೇ ಇರುತ್ತದೆ. ಮನುಷ್ಯ ಪ್ರಯತ್ನಕ್ಕೆ ಮೀರಿದ ಅಗೋಚರ ಶಕ್ತಿಯೊಂದಿದೆ ಎನ್ನುವುದು ನಾವು ಸದಾ ನೆನಪಿನಲ್ಲಿ ಇಟ್ಟುಕೊಂಡಿರಬೇಕು. ಹಿಂದೆಯೂ ಈ ರೀತಿ ವಿಕೋಪಗಳು ನಡೆದಿದೆ, ಮುಂದೆಯೂ ನಡೆಯಬಹುದು. ಅದನ್ನೆಲ್ಲಾ ಧೈರ್ಯವಾಗಿ ಎದುರಿಸಿ ಜೀವನ ನಡೆಸಿದರೆ ಅದೇ ನಿಜವಾದ ಜೀವನ. ಈಗ ಬಂದಿರುವ ಪರಿಸ್ಥಿತಿ ಹೋಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸೋಣ.

**ಸಂಸ್ಕಾರಗಳು :** ಮಾನವನ ಹುಟ್ಟಿನಿಂದ ಅಂತ್ಯದವರೆಗೂ ಒಟ್ಟು ಹದಿನಾರು (16) ಸಂಸ್ಕಾರಗಳು ಕರ್ಮಗಳು ವಿಧಿಸಿದೆ ಎಂದು ಶಾಸ್ತ್ರದಲ್ಲಿದೆ. ಅವುಗಳಲ್ಲಿ ಮುಖ್ಯವಾದವು ಜಾತಕ ಕರ್ಮ, ನಾಮಕರಣ, ಚೂಡಾಕರ್ಮ, ಉಪನಯನ, ವಿವಾಹ ಹಾಗೂ ಕೊನೆಯಲ್ಲಿ ಅಂತ್ಯಕರ್ಮ (ಶ್ರಾದ್ಧಕರ್ಮ). ಈ ಅಂತ್ಯಕರ್ಮವು ನಮ್ಮ ಹಿಂದೂಗಳಿಗಲ್ಲದೆ ದೇಶದ ಎಲ್ಲಾ ಧರ್ಮಕ್ಕೆ ಅನುಗುಣವಾದ ರೀತಿಯಲ್ಲಿ ಆಚರಿಸಲ್ಪಡುತ್ತದೆ. ವ್ಯಕ್ತಿಯ (ಅಂತ್ಯದ) ಸಾವಿನ ನಂತರ ದೇಹದಿಂದ ಹೊರಬಂದ ಆತ್ಮವು ಪರಲೋಕದಲ್ಲಿ ಸಂಚರಿಸುವಾಗ ಸಹಾಯಕ್ಕೆ ಕೊಡುಗೆಯನ್ನು ಇಷ್ಟಪಡುತ್ತದೆ. ಅದು ಯಾವುದೆಂದರೆ ಪ್ರತಿ ತಿಂಗಳು ಹಾಗೂ ಪ್ರತಿವರ್ಷ ನಡೆಸುವ ಶ್ರಾದ್ಧಕರ್ಮ. ಈಗಿನ ಪರಿಸ್ಥಿತಿಯಲ್ಲಿ ಯಾವ ಧರ್ಮದವರೂ ಸಹ ಅವರವರ ಧರ್ಮಕ್ಕೆ ಅನುಗುಣವಾಗಿ ಅಂತ್ಯಕ್ರಿಯೆಯಾಗಲೀ ಮತ್ತು ಶ್ರಾದ್ಧವಾಗಲೀ ಮಾಡಲಾಗದೆ ಇರುವುದು ವಿಪರ್ಯಾಸವಾಗಿದೆ. ಈ ಪರಿಸ್ಥಿತಿ ಮುಂದುವರೆಯದೆ ಉತ್ತಮವಾದ ದಿನ ಬರಲಿ ಎಂದು ಭಗವಂತನಲ್ಲಿ ಪ್ರಾರ್ಥಿಸೋಣ.

**ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ ।**
**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್ ದುಃಖಭಾಗ್ಭವೇತ್ ॥**
**ಓಂ ಶಾಂತಿಃ ಶಾಂತಿಃ ಶಾಂತಿಃ**

ಎಲ್ಲರೂ ಸುಖವಾಗಿರಲಿ, ಸುಭದ್ರತೆ ಹೊಂದಿ ನಿರಾತಂಕ ಮನಸ್ಸಿನವರಾಗಿರಲಿ, ಯಾರಿಗೂ ದುಃಖ ಬಾರದಿರಲಿ, ನಾವು ಪರಿಪೂರ್ಣ, ದೇವರೂ ಪರಿಪೂರ್ಣ, ಬ್ರಹ್ಮನು ತನ್ನ ಪೂರ್ಣತ್ವವನ್ನು ಹಾಗೆಯೇ ಉಳಿಸಿಕೊಳ್ಳುತ್ತಾನೆ.

***ಕೃಪೆ : "ಶ್ರೀ ಶಂಕರ ಕೃಪಾ"***

# ಶೃಂಗೇರಿ ಜಗದ್ಗುರುಗಳಿಂದ ಶಿಲಾ ಪೂಜೆ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯದಲ್ಲಿ ಸುಮಾರು ರೂ. 50 ಲಕ್ಷ ವೆಚ್ಚದಲ್ಲಿ ಪ್ರಥಮ ಮತ್ತು ದ್ವಿತೀಯ ಹಂತಗಳಿಗೆ ಲಿಫ್ಟ್, ಮೆಟ್ಟಿಲುಗಳು ಹಾಗೂ ಇತರ ನವೀಕರಣ ಕಾಮಗಾರಿಗಳನ್ನು ಹಮ್ಮಿಕೊಂಡಿದ್ದು, ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ದಿವ್ಯಹಸ್ತದಿಂದ ಆಶೀರ್ವಚನ ಮೂಲಕ ಶಿಲೆಗಳನ್ನು ಪೂಜಿಸಿ, ಅನುಗ್ರಹ ಪಡೆಯಲಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೆ., ಉಪಾಧ್ಯಕ್ಷರಾದ ಡಾ| ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆಕಾರ್ಯದರ್ಶಿ ಶ್ರೀ ಚೇತನ್ ಶರ್ಮ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಉಪಮೇಯರ್ ಶ್ರೀಮತಿ ಸುಮಂಗಲಾ ರಾವ್, ನಿರ್ದೇಶಕರು ಹಾಗೂ ಸದಸ್ಯರು ಉಪಸ್ಥಿತರಿದ್ದು ಗುರುಗಳ ಕೃಪೆಗೆ ಪಾತ್ರರಾದರು.



# ಪುತ್ತೂರಿನ 'ಶಿವಸದನ' ವಿಸ್ತೃತ ಕಟ್ಟಡದ ಶಿಲಾನ್ಯಾಸ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿನ ಹಿರಿಯ ನಾಗರಿಕರ ವಸತಿ ನಿಲಯದ ವಿಸ್ತೃತ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮವು ತಾ 1-09-2021ನೇ ಬುಧವಾರ ನೆರವೇರಿತು. ಬೆಳಗ್ಗೆ ಗಂಟೆ 9-15ಕ್ಕೆ ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ಅಮೃತಹಸ್ತದಿಂದ ಪೂಜಿಸಲ್ಪಟ್ಟ ಶಿಲೆಗಳನ್ನು ಆರತಿ ಬೆಳಗಿ ಶಂಕುಸ್ಥಾಪನೆ ನಡೆಸಲಾಯಿತು. ಪುತ್ತೂರು ಶಾಸಕ ಶ್ರೀ ಸಂಜೀವ ಮಠಂದೂರು ಪೂಜೆ ಸಲ್ಲಿಸಿ, ಶಿಲಾನ್ಯಾಸ ನಾಮಫಲಕವನ್ನು ಅನಾವರಣಗೊಳಿಸಿದರು.




ಸುಮಾರು ರೂ. 50 ಲಕ್ಷ ವೆಚ್ಚದಲ್ಲಿ ಲಿಫ್ಟ್, ಮೆಟ್ಟಿಲು, ವಿಸ್ತೃತ ಕಟ್ಟಡದ ಕಾಮಗಾರಿಗೆ ಈ ಮೂಲಕ ಚಾಲನೆ ನೀಡಲಾಯಿತು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಶಾಸಕರು ತನ್ನ ಹಾಗೂ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಅನುದಾನ ನೀಡುವ ಭರವಸೆ ನೀಡಿ, ಶುಭ ಹಾರೈಸಿದರು. ಮಂಗಳೂರು ಮಹಾನಗರಪಾಲಿಕೆ ಉಪ ಮಹಾಪೌರರಾದ ಶ್ರೀಮತಿ ಸುಮಂಗಲಾ ರಾವ್, ಪುತ್ತೂರು ಮಂಡಲ ಬಿಜೆಪಿ ಅಧ್ಯಕ್ಷ ಶ್ರೀ ಸಾಜ ರಾಧಾಕೃಷ್ಣ ಆಳ್ವ, ಕಬಕ ಪಂಚಾಯತ್ ಅಧ್ಯಕ್ಷ ಶ್ರೀ ವಿನಯಕುಮಾರ್ ಕಲ್ಲೇಗ ಈ ಕಾಮಗಾರಿಗೆ ಸಹಕರಿಸುವುದಾಗಿ ತಿಳಿಸಿ, ಶುಭಹಾರೈಸಿದರು. ವೇ| ಮೂ| ಶ್ರೀ ಸೂರ್ಯನಾರಾಯಣ ಭಟ್, ಶ್ರೀ ಅನಂತ್ ಭಟ್ ವೇದಘೋಷದೊಂದಿಗೆ ಕಾರ್ಯಕ್ರಮ ಆರಂಭವಾಯಿತು.



ಮಹಿಳಾ ವೇದಿಕೆ ಪದಾಧಿಕಾರಿಗಳಾದ ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀಮತಿ ಪುಷ್ಪಾ ಶ್ರೀನಿವಾಸ್ ಪ್ರಾರ್ಥನೆ ಹಾಡಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಸ್ವಾಗತಿಸಿ, ನಿರೂಪಿಸಿದರೆ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಪ್ರಸ್ತಾವನೆ ಮಾಡಿದರು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಧನ್ಯವಾದ ಅರ್ಪಿಸಿದರು. ಶ್ರೀ ಸಭಾದ ನಿರ್ದೇಶಕರುಗಳು, ಸದಸ್ಯರು, ಹಿತೈಷಿಗಳು, ಶಿವಸದನದ ನಿವಾಸಿಗಳು, ಸಹಾಯಕರು, ಊರಿನ ಗಣ್ಯರು ಭಾಗವಹಿಸಿ, ಸಹಕರಿಸಿದರು.

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾನಿಧಿ ಸ್ಥಾಪನೆ



ಪಡುಮಲೆ ಶ್ರೀ ಶ್ರೀನಿವಾಸ ರಾವ್‌ರವರು ತಮ್ಮ ಮಕ್ಕಳಾದ ಶ್ರೀ ಸಂದೀಪ್, ಶ್ರೀಮತಿ ಶರಣ್ಯ, ಶ್ರೀಮತಿ ಸುಕನ್ಯ ಅಳಿಯಂದಿರಾದ ಶುಂಟಿಪಾಡಿ ಶ್ರೀ ಸಂಪತ್ ಕುಮಾರ್, ಶ್ರೀ ಬಿ. ಕೆ. ಜ್ಞಾನೇಶ್, ಸೊಸೆ ಶ್ರೀಮತಿ ದೀಪಿಕಾ ರಾವ್‌ರವರ ಸಹಕಾರದೊಂದಿಗೆ ಪಡುಮಲೆ ಶ್ರೀಮತಿ ಗೌರಿ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಕ್ಕೆ ರೂ. 3 ಲಕ್ಷ ನೀಡಿ ವಿದ್ಯಾರ್ಥಿ ನಿಧಿಯನ್ನು ಸ್ಥಾಪಿಸಿದ್ದಾರೆ ಹಾಗೂ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೂ ದೇಣಿಗೆ ನೀಡುವ ಭರವಸೆಯನ್ನು ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಶ್ರೀ ವೇಣುಗೋಪಾಲ ಶಾನುಭೋಗ್, ಶ್ರೀ ಶ್ಯಾಮ್‌ಪ್ರಸಾದ್ ಶಾನುಭೋಗ್, ಶ್ರೀ ಕೃಷ್ಣಪ್ರಸಾದ್ ಶಾನುಭೋಗ್ ತಮ್ಮ ತಂದೆ ಶ್ರೀ ಕೊಡ್ಲು ವಿಷ್ಣು ಶಾನುಭೋಗ್ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಕ್ಕೆ ರೂ. 1,00,000/- ನೀಡಿ ವಿದ್ಯಾರ್ಥಿನಿಧಿಯನ್ನು ಸ್ಥಾಪಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಚಿತ್ರಗಳು : ಶ್ರೀ ರಘುವೀರ್ ಪೆರ್ಡೂರು



ಹೆಬ್ಬೂರಿನ ಕೋದಂಡಾಶ್ರಮ ಮಠದ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳ ಚಾತುರ್ಮಾಸ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ವತಿಯಿಂದ ಹೊರೆಕಾಣಿಕೆ, ಪಾದಪೂಜೆ, ಭಿಕ್ಷಾವಂದನೆ ಸಮರ್ಪಿಸಿ ಫಲ, ಮಂತ್ರಾಕ್ಷತೆ ಪಡೆಯಲಾಯಿತು. ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್, ಶ್ರೀ ಸಿ. ಎ. ನಾಗರಾಜ್ ಶರ್ಮ ಭಾಗವಹಿಸಿ ಕೃತಾರ್ಥರಾದರು.



**Publisher :** Sri Harsha Kumar Kedige, President, Shree Subrahmanya Sabha (R.), Kodialbail, Mangalore - 3
**Editor :** Sri M. S. Raghunath Rao, Darbe, Puttur
**Printed at :** Rajesh Power Press, Darbe - 574 202, Puttur, D. K.